# ನೀಲಗಿರಿಯಲ್ಲಿ ಸ್ವಿಟ್ಜರ್‌ಲ್ಯಾಂಡ್‌ಗಳು

**ಮೋಹನ ದಾಸ್***

**DOI: https://doi.org/10.5281/zenodo.19415855**

**ABSTRACT**

ತಮಿಳು ನಾಡಿನ ನೀಲಗಿರಿ ಜಿಲ್ಲೆಯ ಪ್ರಮುಖ ಗಿರಿಧಾಮಗಳಾದ ಊಟಿ, ಕುನ್ನೂರು, ಕೋತಗಿರಿ, ಕುಂದಾ ಮತ್ತು ಪಂದಲೂರು ಪ್ರದೇಶಗಳ ಐತಿಹಾಸಿಕ ಬೆಳವಣಿಗೆ, ಭೌಗೋಳಿಕ ಮಹತ್ವ ಹಾಗೂ ನೈಸರ್ಗಿಕ ಸೌಂದರ್ಯದ ಸಮಗ್ರ ಚಿತ್ರಣವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಬ್ರಿಟಿಷ್ ಆಡಳಿತಾವಧಿಯಲ್ಲಿ ಜಾನ್ ಸಲ್ಲಿವನ್ ಮುಂತಾದವರಿಂದ ಅಭಿವೃದ್ಧಿಗೊಂಡ ಈ ತಾಣಗಳು, ಯುರೋಪಿನ 'ಸ್ವಿಟ್ಜರ್‌ಲ್ಯಾಂಡ್'ಗೆ ಹೋಲಿಕೆಯಾಗುವಷ್ಟರ ಮಟ್ಟಿಗೆ ಪ್ರಕೃತಿ ಸೌಂದರ್ಯವನ್ನು ಹೊಂದಿವೆ. ಆಡಳಿತ ಕೇಂದ್ರಗಳ ಸ್ಥಾಪನೆ, ರಸ್ತೆ ಸಂಪರ್ಕ, ಚಹಾ-ಕಾಫಿ ತೋಟಗಳ ವಿಸ್ತರಣೆ ಹಾಗೂ ಶೈಕ್ಷಣಿಕ ಸಂಸ್ಥೆಗಳ ಉದಯವು ಈ ಪ್ರದೇಶಗಳ ಚಿತ್ರಣವನ್ನೇ ಬದಲಿಸಿತು. ಇದರ ಜೊತೆಗೆ, ವಲಸಿಗರ ಹರಿವು ಮತ್ತು ಪಣಿಯ, ಕುರುಬ, ಕೋತ ಮುಂತಾದ ಮೂಲನಿವಾಸಿಗಳ ಸಾಂಸ್ಕೃತಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಮೇಲೆ ಉಂಟಾದ ಪಲ್ಲಟಗಳ ಮೇಲೂ ಬೆಳಕು ಚೆಲ್ಲಲಾಗಿದೆ. ಒಟ್ಟಾರೆಯಾಗಿ, ನೀಲಗಿರಿಯ ನೈಸರ್ಗಿಕ ರಮಣೀಯತೆ ಮತ್ತು ಅದರೊಡನೆ ಬೆಸೆದುಕೊಂಡಿರುವ ಚಾರಿತ್ರಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಇದು ತೆರೆದಿಡುತ್ತದೆ.

**KEYWORDS:** ನೀಲಗಿರಿ, ಗಿರಿಧಾಮಗಳು, ಬ್ರಿಟಿಷ್ ಆಡಳಿತ, ಪ್ರಕೃತಿ ಸೌಂದರ್ಯ, ಮೂಲನಿವಾಸಿಗಳು.

* **ಡಾ. ಮೋಹನ ದಾಸ್**, ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ರಾಮನಗರ.

**ಊಟಿ**

ಊಟಿಯು ನೀಲಗಿರಿಯ ಮುಖ್ಯ ನಗರ. ನೀಲಗಿರಿಯ ಇತಿಹಾಸದಲ್ಲಿ ಊಟಿಯ ಇತಿಹಾಸ ಅಜರಾಮರ. ಊಟಿಯ ಮೂಲ ಹೆಸರು ಒತ್ತೈ. ಕನ್ನಡಿಗರು ಇದನ್ನು ವತ್ತೆ ಎಂದು ಕರೆದರು. ಇದಕ್ಕಿರುವ ಮತ್ತೊಂದು ಹೆಸರು ಉದಕಮಂಡಲ. ನೀಲಗಿರಿ ಪ್ರತ್ಯೇಕ ಜಿಲ್ಲೆಯಾದ ಸಂದರ್ಭದಲ್ಲಿ, ಜಾನ್‌ಸಲ್ಲಿವನ್ ಕೋತಗಿರಿಯಿಂದ ಆಡಳಿತ ನಡೆಸುತ್ತಿದ್ದನು. ಕೋತಗಿರಿಯಿಂದ ಇಪ್ಪತ್ತಾರು ಮೈಲಿಯಾಚೆಗಿನ ಊಟಿಗೆ ಭೇಟಿ ನೀಡಿ ಪರಿಶೀಲಿಸಿದ. ಆ ನಂತರ ಈಗಿರುವ ಊಟಿ ನೀಲಗಿರಿ ಜಿಲ್ಲೆಯ ಮುಖ್ಯ ಆಡಳಿತ ಕೇಂದ್ರವಾಗಲು ಯೋಗ್ಯವಾದ ಸ್ಥಳ ಎಂದು ತೀರ್ಮಾನಿಸಿದ. ತನ್ನ ವಾಸಕ್ಕೆಂದು 'ಸ್ಟೋನ್ ಹೌಸ್' ಹೆಸರುಳ್ಳ ಬಂಗಲೆ ನಿರ್ಮಿಸಿಕೊಂಡ. ಕೊಯಂಬತ್ತೂರಿನ ಬ್ರಿಟಿಷ್ ಕಲೆಕ್ಟರ್ ಆಗಿ ಸೇವೆ ಆರಂಭಿಸಿದ. ಊಟಿಯ ಪ್ರಕೃತಿ ಸೌಂದರ್ಯಕ್ಕೆ ಮರುಳಾಗಿ ಊಟಿಯನ್ನು ಯುರೋಪಿನ ಸ್ವಿಟ್ಜರ್‌ಲ್ಯಾಂಡ್‌ಗೆ ಹೋಲಿಕೆ ಮಾಡಿ ಅಲ್ಲಿನ ದೊರೆ ಸರ್ ಥಾಮಸ್ ಮನ್ರೋರವರಿಗೆ ಊಟಿಯು ಸ್ವಿಟ್ಜರ್‌ಲ್ಯಾಂಡ್‌ನಂತಿದೆ ಎಂಬ ವರ್ಣನೆಯ ರೂಪದಲ್ಲಿ ಪತ್ರವನ್ನು ಬರೆದಿದ್ದನಂತೆ. ಊಟಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ನೀಲಗಿರಿಗೆ ಸರಿಯಾದ ರಸ್ತೆಗಳ ಸಂಪರ್ಕವಿರಲಿಲ್ಲ. ಮೊಟ್ಟಮೊದಲಿಗೆ ಮೇಟುಪಾಳ್ಯ ಸಮೀಪದ ಸಿರುಮೊಗೆ ಎಂಬಲ್ಲಿಂದ ಕೋತಗಿರಿಯ ದಿಂಬಟ್ಟಿವರೆಗೆ ರಸ್ತೆ ನಿರ್ಮಾಣ ಮಾಡಿದ. ನಂತರ ಮೇಟುಪಾಳ್ಯದಿಂದ ಕುನ್ನೂರುವರೆಗೆ ರಸ್ತೆ ನಿರ್ಮಾಣವಾಯಿತು. ಆ ನಂತರದಲ್ಲಿ ಊಟಿ ಮೈಸೂರು, ಊಟಿ ಕಲ್ಲಿಕೋಟೆ ಹಾಗೆಯೇ ಇತರೆ ರಸ್ತೆ ಮಾರ್ಗಗಳು ನಿರ್ಮಾಣಗೊಂಡವು.

ನಿಧಾನವಾಗಿ ಊಟಿ ನಗರದಲ್ಲಿ ಆಡಳಿತ ಕಚೇರಿಗಳ ಜೊತೆಗೆ ಒಂದೊಂದಾಗಿ ಶಾಲೆಗಳು, ಚರ್ಚ್‌ಗಳು, ಆಸ್ಪತ್ರೆ, ಅಂಚೆ ಕಚೇರಿ, ಪೋಲಿಸ್ ಠಾಣೆ ಮುಂತಾದವು ಪ್ರಾರಂಭಗೊಂಡವು. ಬ್ರಿಟಿಷರು ಇಂಗ್ಲೆಂಡಿನಿಂದ ತರಿಸಿಕೊಂಡ ಅಗತ್ಯ ವಸ್ತುಗಳನ್ನು ವ್ಯಾಪಾರ ಮಾಡುವ ಸಲುವಾಗಿ ವ್ಯಾಪಾರ ಮಳಿಗೆಗಳನ್ನು ಆರಂಭಿಸಿದರು. ನಂತರ ಯುದ್ಧಗಳಲ್ಲಿ ಗಾಯಗೊಂಡ ಬ್ರಿಟಿಷ್ ಸೈನಿಕರು ಆರೋಗ್ಯ ಸುಧಾರಿಸಿಕೊಳ್ಳಲು ಆರೋಗ್ಯಧಾಮಗಳು ಪ್ರಾರಂಭಗೊಂಡವು. ಜಾನ್‌ಸುಲೆಮಾನ್ ಯುರೋಪಿಯನ್ನರನ್ನು ನೀಲಗಿರಿಗೆ ಭೇಟಿ ಕೊಡುವಂತೆ, ಅವರು ನಿವೃತ್ತಿಯ ನಂತರ ಊಟಿಯಲ್ಲಿ ನೆಲೆಸುವಂತೆ ಮಾಡಲು ಸರ್ವಪ್ರಯತ್ನ ಮಾಡಿದನು. ಇದಿಷ್ಟೇ ಅಲ್ಲದೆ ದೇಶೀಯ ರಾಜರುಗಳು ಊಟಿಯಲ್ಲಿ ತಮ್ಮ ಭವನಗಳನ್ನು ನಿರ್ಮಿಸಿಕೊಳ್ಳಲು ಸಹಕಾರ ನೀಡಿದ್ದನು. ಅನೇಕ ಶ್ರೀಮಂತರು ಊಟಿಯಲ್ಲಿ ಬಂಗಲೆಗಳನ್ನು ನಿರ್ಮಿಸಿಕೊಳ್ಳಲು ಪ್ರೋತ್ಸಾಹಿಸಿದ. ಈ ನಿಟ್ಟಿನಲ್ಲಿ ಮೈಸೂರು ಮತ್ತು ತಿರುವನಂತಪುರಂ ರಾಜರುಗಳು ಸೇರಿದಂತೆ ಇತರ ಭಾಗದ ಅನೇಕ ರಾಜರುಗಳು ಊಟಿಯಲ್ಲಿ ಅರಮನೆಗಳನ್ನು ಕಟ್ಟಿಸಿಕೊಂಡರು.

ದೊಡ್ಡಬೆಟ್ಟದ ಪರ್ವತ ಶಿಖರದ ಬುಡದಲ್ಲಿರುವ ಊಟಿ ನಗರದಲ್ಲಿ, ಲಂಡನ್ ನಗರವನ್ನು ನೆನಪಿಸುವಂತೆ 'ಚೇರಿಂಗ್ ಕ್ರಾಸ್' ನಿರ್ಮಾಣಗೊಂಡಿತು.

1824ನೇ ಇಸವಿಯಲ್ಲಿ ಊಟಿಯ ಸೌಂದರ್ಯಕ್ಕೆ ಮೆರಗು ನೀಡುವಂತಹ ಊಟಿ ಲೇಕ್, 1829ನೇ ಇಸವಿಯಲ್ಲಿ ಸೆಂಟ್ ಸ್ಟಿಫನ್ ಚರ್ಚ್, 1840ನೇ ಇಸವಿಯಲ್ಲಿ ಬೊಟಾನಿಕಲ್ ಗಾರ್ಡನ್, 1858ನೇ ಇಸವಿಯಲ್ಲಿ ಲವ್‌ಡೇಲಿನ ಲಾರೆನ್ಸ್ ಸ್ಕೂಲ್, 1859ನೇ ಇಸವಿಯಲ್ಲಿ ನೀಲಗಿರಿ ಲೈಬ್ರರಿ, 1874ನೇ ಇಸವಿಯಲ್ಲಿ ಬ್ರಿಕ್ಸ್ ಮೆಮೋರಿಯಲ್ ಸ್ಕೂಲ್, 1900ನೇ ಇಸವಿಯ ವೇಳೆಗೆ ನೀಲಗಿರಿ ಬೆಟ್ಟದ ರೈಲು, ಕುದುರೆ ಜೂಜಿನ ಮೈದಾನ, ಮನರಂಜನೆಗಾಗಿ ಥಿಯೇಟರ್‌ಗಳು ಪ್ರಾರಂಭಗೊಂಡವು. 1900ನೇ ಇಸವಿಯ ಪ್ರಾರಂಭದಲ್ಲಿ ನೀಲಗಿರಿ ಮದರಾಸು ಪ್ರಾಂತ್ಯದ ಬೇಸಿಗೆ ರಾಜಧಾನಿಯಾಗಿತ್ತು. ಅಂದಿನಿಂದ ಪ್ರತೀ ವರ್ಷ ಮೇ ತಿಂಗಳಿನಿಂದ ಅಕ್ಟೋಬರ್‌ವರೆವಿಗೂ ಮದರಾಸು ಸರ್ಕಾರ ಮತ್ತು ಅದರ ಅಧಿಕಾರಿ ವರ್ಗ ಊಟಿಯಿಂದ ಆಡಳಿತ ನಡೆಸುವ ಪರಿಪಾಠವನ್ನು ಪ್ರಾರಂಭಿಸಿತು. ಮದರಾಸಿನ ಗವರ್ನರ್‌ಗಳು ಮತ್ತು ಅವರ ಕುಟುಂಬದವರು ಉಳಿದುಕೊಳ್ಳಲು ಬ್ರಿಟಿಷ್ ಸರ್ಕಾರವು ಗವರ್ನಮೆಂಟ್ ಹೌಸ್‌ನ್ನು ನಿರ್ಮಿಸಿಕೊಟ್ಟಿತು.

ಪ್ರಸ್ತುತ ದಕ್ಷಿಣ ಭಾರತದ ಬಹುಮುಖ್ಯ ಪ್ರವಾಸಿತಾಣವಾಗಿರುವ ಊಟಿಯು ತನ್ನ ಸುತ್ತಲೂ ಅನೇಕ ಪ್ರೇಕ್ಷಣೀಯ ಸ್ಥಳಗಳಾದ ದೊಡ್ಡಬೆಟ್ಟ, ಬೊಟಾನಿಕಲ್ ಗಾರ್ಡನ್, ರೋಸ್ ಗಾರ್ಡನ್, ಬೋಟ್‌ಹೌಸ್, ವೆನ್‌ಲಾಕ್ ಡೌನ್, ಕರ್ನಾಟಕ ಪಾರ್ಕ್ ಮತ್ತು ಗೆಸ್ಟ್‌ಹೌಸ್, 10ನೇ ಮೈಲಿಯ ಶೂಟಿಂಗ್ ಸ್ಪಾಟ್, ಕಾಮರಾಜ ಸಾಗರ, ಪೈಕಾರ ಫಾಲ್ಸ್ ಮತ್ತು ಪೈಕಾರ ಬೋಟ್ ಹೌಸ್, ಮೂಕುರ್ತಿ ಬೆಟ್ಟದ ತಪ್ಪಲು, ಗ್ಲೆನ್‌ಮಾರ್ಗನ್ ಡ್ಯಾಂ, ಅವಲಾಂಜಿ, ಎಮರಾಲ್ಡ್ ಮತ್ತು ಅಪ್ಪರ್ ಭವಾನಿ ಅಣೆಕಟ್ಟು, ಕುನ್ನೂರಿನ ಸಿಮ್ಸ್ ಪಾರ್ಕ್, ಕೋತಗಿರಿ, ಕುಂದಾ, ಪಂದಲೂರು, ಅರವಂಗಾಡಿನ ವೆಲ್ಲಿಂಗ್‌ಟನ್, ಸೋಲೂರಿನ ನೈಸರ್ಗಿಕ ಸೌಂದರ್ಯ, ಟಿ.ಆರ್. ಬಜಾರ್ ಲೇಕ್ ಮತ್ತು ಪ್ರಾಕೃತಿಕ ಸೌಂದರ್ಯ, ಟೀ ಎಸ್ಟೇಟ್‌ಗಳು, ಊಟಿಯ ಬಡಗರ ಹಟ್ಟಿ, ಗೂಡಲೂರು, ಮಸಿನಗುಡಿ ಫಾರೆಸ್ಟ್, ತೆಪ್ಪಕಾಡು ಬಹುತೇಕ ಕಾಡು ಪ್ರಾಣಿಗಳನ್ನು ಅದರಲ್ಲೂ ಹೆಚ್ಚಾಗಿ ಹುಲಿಗಳಿರುವ, ದಟ್ಟವಾದ ಅರಣ್ಯ ಪ್ರದೇಶ ತೆಪ್ಪಕಾಡು ಇತ್ಯಾದಿ ಹೊಂದಿರುತ್ತದೆ. ಮೇಟುಪಾಳ್ಯದ ಮಾರ್ಗವಾಗಿ ಬೆಟ್ಟದ ರೈಲಿನಲ್ಲಿ ಪ್ರಯಾಣ ಮಾಡಿ ಊಟಿಯನ್ನು ತಲುಪುವ ಅಪೂರ್ವ ಅನುಭವ ಪಡೆಯುವುದಕ್ಕಾಗಿಯೇ ಪ್ರವಾಸಿಗರು ಭೇಟಿ ನೀಡುತ್ತಾರೆ. ಹೊಸದಾಗಿ ವಿವಾಹವಾದ ನವ ದಂಪತಿಗಳ ಹನಿಮೂನ್ ಅನುಭವವು ಜೀವನ ಪೂರ್ತಿ ನೆನಪಿನ ಬುತ್ತಿಯಲ್ಲಿ ಗೂಡುಕಟ್ಟಿರುತ್ತದೆ. ಊಟಿಗೆ ಹೊಂದಿಕೊಂಡಿರುವಂತೆ ಹಲವಾರು ಟೀ ಎಸ್ಟೇಟ್‌ಗಳಿವೆ. ಅಲ್ಲಿ ಹೈನುಗಾರಿಕೆ, ತರಕಾರಿ ಬೆಳೆಗಳ ರಾಶಿಯನ್ನೇ ನೋಡಬಹುದು.

**ಕುನ್ನೂರು**

ಊಟಿಯಿಂದ ಕುನ್ನೂರು 18 ಕಿ.ಮೀ. ದೂರದಲ್ಲಿದೆ. ಇದು ತಾಲ್ಲೂಕಿನ ಮುಖ್ಯ ಸ್ಥಳ. ಊಟಿಯ ನಂತರದ ಎರಡನೇ ದೊಡ್ಡ ಹಿಲ್‌ಸ್ಟೇಷನ್. ಜಿಲ್ಲೆಯ ದಕ್ಷಿಣ ಭಾಗದ ಬೆಟ್ಟದ ಬುಡದಿಂದ ತುದಿಯವರೆವಿಗೂ ಬೆಳೆದು ನಿಂತಿರುವ ಊರು.

ಸಂದುಸಂದಾದ ಇಕ್ಕಟ್ಟಿನ ಅಂಗಡಿ ಮುಂಗಟ್ಟುಗಳು, ಬೀದಿಯಲ್ಲಿ ಸದಾ ಜನಜಂಗುಳಿ ಕಂಡುಬರುತ್ತದೆ. ಕೊಯಂಬತ್ತೂರ್, ಊಟಿ ಮತ್ತು ಮೈಸೂರಿನೊಂದಿಗೆ ಸಂಪರ್ಕ ಕಲ್ಪಿಸುವ ಹೆದ್ದಾರಿ–67 ಕುನ್ನೂರಿನ ಮೂಲಕ ಹಾದು ಹೋಗುತ್ತದೆ. ಇಲ್ಲಿಯ ವಾತಾವರಣ ಊಟಿಗಿಂತ ಸ್ವಲ್ಪ ಬೆಚ್ಚಗಿರುತ್ತದೆ. ಕುನ್ನೂರು ನೀಲಗಿರಿಯ ಪ್ರವೇಶಕ್ಕೆ ಹೆಬ್ಬಾಗಿಲಿನಂತಿದೆ. ಬಯಲು ಸೀಮೆಯಾದ ಮೇಟುಪಾಳ್ಯಂ ಮತ್ತು ಕಾರಮಡೈ ಸಂತೆಗಳಿಂದ ವ್ಯಾಪಾರಿಗಳು ಕತ್ತೆ ಮತ್ತು ಎತ್ತುಗಳ ಮೂಲಕ ಸರಕು ಸರಂಜಾಮುಗಳನ್ನು ಸಾಗಿಸಿ ತಂದು ಕುನ್ನೂರಿನಲ್ಲಿ ಮತ್ತು ಸುತ್ತಮುತ್ತಲ ಬಡಗರ ಹಟ್ಟಿಗಳಲ್ಲಿ ವ್ಯಾಪಾರ ಮಾಡುತ್ತಿದ್ದರು.

ಲಾರ್ಡ್ ಡಾಲ್‌ಹೌಸಿಯ ಆಪ್ತ ವೈದ್ಯರಾಗಿದ್ದ ಡಾ. ಗ್ರ್ಯಾಂಟ್ ಎಂಬಾತ 1855ನೇ ಇಸವಿಯಲ್ಲಿ ಭೇಟಿ ನೀಡಿದ್ದ. ಅಲ್ಲಿನ ವಾತಾವರಣ ಹಾಗೂ ಪ್ರಾಕೃತಿಕ ಸೌಂದರ್ಯವನ್ನು ಬಹಳವಾಗಿ ಮೆಚ್ಚಿದ್ದ. ಅದರ ಪರಿಣಾಮವಾಗಿ ಕ್ರಿಮಿಯಾ ಯುದ್ಧದಲ್ಲಿ ಹೋರಾಡಿದ್ದ ಬಹುತೇಕ ನಿವೃತ್ತ ಯೋಧರು ತಮ್ಮ ಕುಟುಂಬ ಸಮೇತರಾಗಿ ಬಂದು ಕುನ್ನೂರಿನಲ್ಲಿ ನೆಲೆಸಿದ್ದರು. ಬಿಳಿಯರು ತೋಟಗಳ ಒಡೆಯರಾದರು. ಪ್ರಾಕೃತಿಕ ಸೌಂದರ್ಯಕ್ಕೆ ಮಾರುಹೋದ ಹಾಗೂ ಅಲ್ಲಿನ ಅನುಕೂಲಕರ ವಾತಾವರಣದ ಫಲವಾಗಿ ಬಿಳಿಯರು ಅಲ್ಲಿಯೇ ಬಂಗಲೆಗಳನ್ನು ಕಟ್ಟಿಕೊಂಡರು. ಬಿಳಿಯರ ಮಕ್ಕಳಿಗಾಗಿ ಉತ್ತಮ ಶಾಲೆಗಳು, ಕಾನ್ವೆಂಟ್‌ಗಳು ತಲೆ ಎತ್ತಿದವು. ಬೇರೆ ಬೇರೆ ಕಡೆಗಳಲ್ಲಿ ಸರಕಾರದಲ್ಲಿ ಹಾಗೂ ಮಿಲಿಟರಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿಗಳು ತಮ್ಮ ಮಕ್ಕಳನ್ನು ಕುನ್ನೂರಿನ ಶಾಲೆಗಳು ಮತ್ತು ಕಾನ್ವೆಂಟ್‌ಗಳಿಗೆ ಸೇರಿಸುತ್ತಿದ್ದರು. ಬ್ರಿಟಿಷ್ ಬೋರ್ಡಿಂಗ್ ಶಾಲೆಗಳು ದುಬಾರಿ ವೆಚ್ಚದ ಹಾಗೂ ಶಿಸ್ತಿನ ಶಿಕ್ಷಣ ಸಂಸ್ಥೆಗಳೆನಿಸಿಕೊಂಡಿದ್ದವು. ಪ್ರಾರಂಭದಲ್ಲಿ ಬ್ರಿಟಿಷರ ಮಕ್ಕಳಿಗೆ ಮಾತ್ರ ಅಲ್ಲಿ ಓದಲು ಅವಕಾಶವಿತ್ತು. ಆ ನಂತರದಲ್ಲಿ ದೇಸಿ ಅಧಿಕಾರಿಗಳ ಮತ್ತು ಶ್ರೀಮಂತರ ಮಕ್ಕಳಿಗೆ ಅವಕಾಶಗಳನ್ನು ನೀಡಲಾಯಿತು. ಮೌಂಟೇನ್ ಹೋಮ್ ಹೈಸ್ಕೂಲ್ ಅತ್ಯಂತ ಹಳೆಯ ಶಾಲೆ. ಸೆಂಟ್ ಜೋಸೆಫ್ ಕಾಲೇಜು, ಆಂಗ್ಲೋ ಇಂಡಿಯನ್ ಗರ್ಲ್ಸ್ ಹೈಯರ್ ಸೆಕೆಂಡರಿ ಸ್ಕೂಲ್, ಆರ್ಮಿ ಪಬ್ಲಿಕ್ ಸ್ಕೂಲ್, ಕೇಂದ್ರೀಯ ವಿದ್ಯಾಲಯ, ಸ್ಟೇನ್ಸ್ ಹೋಂ ಹೈಸ್ಕೂಲ್ ಮುಂತಾದ ಶಿಕ್ಷಣ ಸಂಸ್ಥೆಗಳು ಗರಿಬಿಚ್ಚಿಕೊಂಡವು.

ಅರವಂಗಾಡಿನ ಸಿಡಿಮದ್ದಿನ ಕಾರ್ಖಾನೆ (ಕಾರ್ಡೈಟ್ ಫ್ಯಾಕ್ಟರಿ), ವೆಲ್ಲಿಂಗ್‌ಟನ್‌ನಲ್ಲಿರುವ ಸೈನಿಕ ತರಬೇತಿ ಕೇಂದ್ರಗಳು ಕುನ್ನೂರಿನ ವ್ಯಾಪ್ತಿಗೆ ಬರುವ ಕಾರಣ ಮಹತ್ವವನ್ನು ಪಡೆದುಕೊಂಡಿರುತ್ತದೆ. ದಕ್ಷಿಣ ಭಾರತದ ಟೀ ಬೆಳೆಗಾರರ ಸಂಘದ ಕಚೇರಿ ಕುನ್ನೂರಿನಲ್ಲಿದೆ. ಶ್ರೀಲಂಕಾ ತಮಿಳರ ಪುನರ್ವಸತಿಗಾಗಿ ಸರಕಾರ ಕುನ್ನೂರಿನಲ್ಲಿ ತಮಿಳುನಾಡು ಟೀ ಪ್ಲಾಂಟೇಶನ್ ಕಾರ್ಪೊರೇಷನ್ ಸ್ಥಾಪಿಸಿರುತ್ತದೆ. ಅಪ್ಪರ್ ಕುನ್ನೂರಿನಲ್ಲಿರುವ ಪಾಶ್ಚರ್ ಇನ್ಸ್ಟಿಟ್ಯೂಟ್‌ನ್ನು ಕುನ್ನೂರಿನ ಒಂದು ಮುಖ್ಯ ಹೆಗ್ಗುರುತು ಎಂದು ಕರೆಯಲಾಗಿದೆ. 1907ನೇ ಇಸವಿಯಲ್ಲಿ ಪ್ರಾರಂಭವಾದ ರೇಬಿಸ್ ಲಸಿಕೆ ಶೋಧಿಸಿದ ಲೂಯಿ ಪಾಶ್ಚರನ ಹೆಸರನ್ನು ಹೊಂದಿರುವ ಮುಖ್ಯವಾದ

ಸಂಶೋಧನ ಸಂಸ್ಥೆಯಾಗಿರುತ್ತದೆ. ಅದು ಹಿಂದೆ ಇನ್‌ಫ್ಲೂಯೆಂಜಾ ಲಸಿಕೆಯ ಸಂಶೋಧನೆಯಲ್ಲಿ ಮಹತ್ವದ ಪಾತ್ರ ವಹಿಸಿತ್ತು. ನಾಯಿ ಕಡಿತದ ರೋಗ ಶಮನಕ್ಕೆ ಬಳಸುವ ರೇಬಿಸ್ ಲಸಿಕೆ, ಡಿ.ಪಿ.ಟಿ ಲಸಿಕೆ, ಡಿ.ಟಿ. ಲಸಿಕೆ ಟಿ.ಟಿ. ಎನ್ನಲಾಗುವ ಟ್ರಿಪಲ್ ಲಸಿಕೆಗಳನ್ನು ತಯಾರಿಸುವ ಸಂಶೋಧನ ಕೇಂದ್ರವಾಗಿರುತ್ತದೆ.

ಕುನ್ನೂರಿನ ಮತ್ತೊಂದು ಕಳಶಪ್ರಾಯ ಎಂದರೆ ಸಿಮ್ಸ್ ಪಾರ್ಕ್ ಎಂಬ ಮತ್ತೊಂದು ಬೊಟಾನಿಕಲ್ ಗಾರ್ಡನ್. ಇದು ಪಾಶ್ಚರ್ ಇನ್ಸ್ಟಿಟ್ಯೂಟ್‌ನ ಎದುರಿಗಿದೆ. ಸುಮಾರು 12 ಎಕರೆ ವಿಸ್ತಾರವನ್ನು ಹೊಂದಿರುವ ಗುಡ್ಡದ ಇಳಿಜಾರಿನಲ್ಲಿ 1874ನೇ ಇಸವಿಯಲ್ಲಿ ಪ್ರಾರಂಭಿಸಲಾಯಿತು. ಪಾರ್ಕ್‌ನ ಬುಡದಲ್ಲಿ ಒಂದು ಕೊಳವಿದ್ದು ಅದನ್ನು ಜಪಾನಿನ ಮಾದರಿಯ ಬೋಟ್‌ಹೌಸ್ ಆಗಿ ಮಾಡಲಾಗಿದೆ. ಪಾರ್ಕ್‌ನಲ್ಲಿ ಬಗೆಬಗೆಯ ಹೂರಾಶಿ, ಮ್ಯಾಗ್ನೋಲಿಯ, ಪೈನ್, ಫರ್ನ್ ಮರ ಮತ್ತು ಕಮೇಲಿಯ ಸೇರಿದಂತೆ 1000ಕ್ಕೂ ಹೆಚ್ಚು ಸಸ್ಯ ಪ್ರಭೇದವನ್ನು ಇಲ್ಲಿ ಕಾಣಬಹುದು. ಇಲ್ಲಿ ಮೇ ತಿಂಗಳಿನಲ್ಲಿ ಪ್ರತೀ ವರ್ಷ ನಡೆಯುವ ಫಲಪುಷ್ಪ ಪ್ರದರ್ಶನ ಸಾವಿರಾರು ಜನರನ್ನು ಆಕರ್ಷಿಸಿರುತ್ತದೆ. ಕುನ್ನೂರಿನ ಸುತ್ತಮುತ್ತಲೂ ಹಲವಾರು ನಿಸರ್ಗದತ್ತ ಪ್ರೇಕ್ಷಣೀಯ ಸ್ಥಳಗಳಿವೆ. ಡಾಲ್ಫಿನ್ ನೋಸ್, ಲ್ಯಾಂಬ್ಸ್ ರಾಕ್, ದುರ್ಗದ ಕೋಟೆ, ಲಾಸ್ ಜಲಪಾತ, ಕಾಟೇರಿ ಜಲಪಾತ, ಸಣ್ಣ ಮತ್ತು ದೊಡ್ಡ ಟೀ ತೋಟಗಳು, ಟೀ ಫ್ಯಾಕ್ಟರಿಗಳು ಇತ್ಯಾದಿಗಳು ಇಂದಿಗೂ ಕಣ್ಮನ ಸೆಳೆಯುತ್ತವೆ.

**ಕೋತಗಿರಿ**

ಕೋತಗಿರಿಯು ಊಟಿಯ ಪೂರ್ವಕ್ಕೆ 28 ಕಿ.ಮೀ. ದೂರದಲ್ಲಿಯೂ, ಕುನ್ನೂರಿನ ಉತ್ತರ ಪೂರ್ವಕ್ಕೆ 20 ಕಿ.ಮೀ ದೂರದಲ್ಲಿದೆ. ನೀಲಗಿರಿಯ ಪೂರ್ವ ಬೆಟ್ಟ ಸಾಲುಗಳ ತುದಿಯಲ್ಲಿರುವ ಈ ಸ್ಥಳವು ಬಯಲು ಸೀಮೆಯ ಮತ್ತು ಬೆಟ್ಟಗಾಡಿನ ಮಧ್ಯೆ ಮುಖ್ಯ ವ್ಯಾಪಾರ ಕೇಂದ್ರವಾಗಿತ್ತು. ದೊಡ್ಡಬೆಟ್ಟದ ಸಾಲಿನ ಪರ್ವತ ಶ್ರೇಣಿಯು ಕೋಡೆಗಾಳಿಯನ್ನು ಅಡ್ಡಗಟ್ಟಿ ಅದರ ತೀವ್ರತೆಯನ್ನು ಕಡಿಮೆ ಮಾಡುವುದರಿಂದ ಕೋತಗಿರಿಯ ಹವೆ ಕುನ್ನೂರು ಮತ್ತು ಊಟಿ ನಗರಗಳಿಗಿಂತಲೂ ಹೆಚ್ಚು ಹಿತಕರವಾಗಿರುತ್ತದೆ. ನೀಲಗಿರಿ ಪ್ರತ್ಯೇಕ ಜಿಲ್ಲೆಯಾದ ಸಂದರ್ಭದಲ್ಲಿ ಕೋತಗಿರಿಯೇ ಆಡಳಿತ ಕೇಂದ್ರವಾಗಿತ್ತು. ಅಲ್ಲಿಯವರೆಗೆ ಘಾಟಿ ರಸ್ತೆ ಎನಿಸಿಕೊಂಡಿದ್ದ ಮೇಟುಪಾಳ್ಯ, ಕೋತಗಿರಿ ರಸ್ತೆ ನಿರ್ಮಾಣವಾದದ್ದು ಆಗಲೇ. ದುಸ್ತರವಾಗಿದ್ದ ಘಾಟಿ ರಸ್ತೆ ಬಹಳ ಹಿಂದಿನ ಕಾಲಗಳಿಂದಲೂ ಬಳಕೆಯಲ್ಲಿತ್ತು. ನೀಲಗಿರಿಯನ್ನು ವಶಪಡಿಸಿಕೊಳ್ಳಲು ರಾಜರು ಸೈನ್ಯದ ಮೂಲಕ ಬರಲು ಹಾಗೂ ವ್ಯಾಪಾರಿಗಳು ಎತ್ತಿನಗಾಡಿ ಮೂಲಕ ಮತ್ತು ಕತ್ತೆಗಳ ಮೂಲಕ ಸರಕು ಸಾಗಿಸಲು ಬಳಸುತ್ತಿದ್ದ ರಸ್ತೆ ಇದು. ಈಗ ಅದೇ ರಾಜ್ಯದ ಹೆದ್ದಾರಿಯಾಗಿರುತ್ತದೆ.

ಕೋತಗಿರಿ ಎಂದರೆ ಅದು ಕೋತರ ಊರಾಗಿತ್ತು. ಕೋತರ ಕೇರಿಯು ಮುಂದೆ ಕೋತಗಿರಿಯಾಯಿತು. ಬ್ರಿಟಿಷ್ ಸರಕಾರ ನೈರ್ಮಲ್ಯ ಸುಧಾರಣೆಯ ಉದ್ದೇಶಗಳಿಗಾಗಿ 1911ನೇ ಇಸವಿಯಲ್ಲಿ ಅದನ್ನು ಕೋತರಿಂದ ಸ್ವಾಧೀನಪಡಿಸಿಕೊಂಡು

ಅವರಿಗೆ ಅಗ್ಗಲ್ ಎಂಬಲ್ಲಿ ನೆಲೆಸಲು ಅವಕಾಶ ಕಲ್ಪಿಸಿಕೊಟ್ಟರು. ಈ ಹಿಂದೆ ಕೋತರು ನೆಲೆ ಇದ್ದ ಸ್ಥಳದಲ್ಲಿ ಕಂಬಟರಾಯನ ಗುಡಿ ಇದೆ. ಕೋತರು ವರ್ಷಕ್ಕೊಮ್ಮೆ ಅಲ್ಲಿ ಕಂಬಟರಾಯನ ಹಬ್ಬ ಮಾಡುತ್ತಾರೆ. ಇಲ್ಲಿರುವ 'ನೆಹರೂ ಉದ್ಯಾನ' ಗುಡಿಯನ್ನು ಸುತ್ತುವರೆದಿರುತ್ತದೆ. ಪ್ರತೀ ವರ್ಷ ಫಲಪುಷ್ಪ ಪ್ರದರ್ಶನ ನಡೆಯುತ್ತದೆ. ಜಾನ್‌ಸುಲೆಮಾನ್ ಸಾಹಸ ಚಾರಣೆ ನಡೆಸಿ ತಲುಪಿದ್ದು ಕೋತಗಿರಿಗೆ, ಊಟಿ ಮುಖ್ಯ ಜಿಲ್ಲಾ ಕೇಂದ್ರವಾಗುವವರೆಗೂ ಸ್ವಲ್ಪ ಕಾಲ ಅಲ್ಲಿಂದಲೇ ಆಡಳಿತ ನಡೆಯುತ್ತಿತ್ತು. ಅಧಿಕಾರಿಗಳಿಗೆ ಬಂಗಲೆಗಳು, ಸೈನಿಕ ಸಿಬ್ಬಂದಿಯ ಬ್ಯಾರಕ್, ಆಸ್ಪತ್ರೆ, ಶಾಲೆಗಳು, ಕ್ಲಬ್‌ಗಳು ಹೀಗೆ ಅನುಕೂಲಕ್ಕೆ ಅಗತ್ಯವಾದುದ್ದೆಲ್ಲಾ ನಿರ್ಮಾಣಗೊಂಡವು. ದಿನಗಳುರುಳಿದಂತೆ ನಿವೃತ್ತ ಬ್ರಿಟಿಷ್ ಅಧಿಕಾರಿಗಳು ಇಲ್ಲಿ ಬಂದು ನೆಲೆಸಲು ಪ್ರಾರಂಭಿಸಿದರು.

ಕೋತಗಿರಿ ತಾಲ್ಲೂಕಿನಲ್ಲಿ ಬಡಗರ ಹಲವು ದೊಡ್ಡ ಊರುಗಳಿವೆ. ಸಾಮೆ, ಗಾಂಜಿ ಇಂತಹ ಬೇರೆ ಬೇರೆ ತರಕಾರಿಗಳು ಹಾಗೂ ಆಲೂಗಡ್ಡೆಯನ್ನು ಬೆಳೆಯುತ್ತಿದ್ದ ಬಡಗರು ಈಗ ಸಣ್ಣ ಮಟ್ಟದ ಟೀ ಬೆಳೆಗಾರರಾಗಿದ್ದಾರೆ. ಪ್ರಾರಂಭದಲ್ಲಿ ಕೋತಗಿರಿ ತಾಲ್ಲೂಕಿನಲ್ಲಿ ಸುಮಾರು 3000 ಎಕರೆಗಳಷ್ಟು ಟೀ ತೋಟಗಳಿದ್ದವು. ಇಲ್ಲಿ ಬಡಗರಲ್ಲದೆ ಇತರೆ ಆದಿವಾಸಿಗಳಾದ ಹಾಲುಕುರುಬ, ಇರುಳ, ಕೋತ ಮತ್ತು ತೊದವ ಮೂಲ ನಿವಾಸಿಗಳು ತಾಲ್ಲೂಕಿನ ಬೇರೆ ಬೇರೆ ಭಾಗಗಳಲ್ಲಿ ವಾಸಿಸುತ್ತಿದ್ದಾರೆ. ಕೋತಗಿರಿಯ ಸಮೀಪದಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದು. ಚಾರಣ ಪ್ರಿಯರಿಗೆ ಅದ್ಭುತ ತಾಣಗಳಿವೆ. ಬಯಲು ಸೀಮೆಯಿಂದ ಬರುವ ಪ್ರವಾಸಿಗರು ಸುತ್ತಮುತ್ತಲಿನ ತಾಣಗಳನ್ನು ವೀಕ್ಷಣೆ ಮಾಡಿ ಸಂಜೆ ಹೊತ್ತಿಗೆ ಹಿಂತಿರುಗಬಹುದು. ಇಲ್ಲಿ ಬಡಗರ ಬಹುಮುಖ್ಯ ಹೆತ್ತೆಗುಡಿ ದೇವತೆಯ ದೇವಸ್ಥಾನವು ಬೇರಗಣಿ ಎಂಬ ಸ್ಥಳದಲ್ಲಿದೆ. ವರ್ಷಕ್ಕೊಮ್ಮೆ ಜಾತ್ರೆ ಉತ್ಸವ ಬಹಳ ಅದ್ದೂರಿಯಾಗಿ ನಡೆಯುತ್ತದೆ. ನೀಲಗಿರಿಯ ಸುತ್ತಮುತ್ತಲಿನ ಬಹುತೇಕ ಬಡಗರು ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ಏಕೆಂದರೆ ಇವರು ಉತ್ಸವದಲ್ಲಿ ಪಾಲ್ಗೊಳ್ಳುವುದು ತಮ್ಮ ಜೀವನದ ಒಂದು ಪವಿತ್ರ ಕರ್ತವ್ಯವೆಂದು ಭಾವಿಸುತ್ತಾರೆ. ಇಲ್ಲಿನ ಮತ್ತೊಂದು ತಾಣವೆಂದರೆ ರಂಗಸ್ವಾಮಿ ಬೆಟ್ಟ. ಕೋಡನಾಡು ಪಾಯಿಂಟ್‌ನಲ್ಲಿ ನಿಂತು ರಂಗಸ್ವಾಮಿ ಶಿಖರವನ್ನು ಹಾಗೂ ಬಳುಕುತ್ತ ಹರಿಯುವ ಮಾಯಾರ ನದಿ ಮತ್ತು ಭವಾನಿ ಸಾಗರ ಅಣೆಕಟ್ಟನ್ನು ನೋಡಬಹುದು. ರಂಗಸ್ವಾಮಿ ಬೆಟ್ಟ 1.785 ಕಿ.ಮೀ. ಎತ್ತರದಲ್ಲಿದೆ. ಇದು ಬಯಲಿನಿಂದ ಬಹಳ ಕಡಿದಾಗಿ ಎದ್ದು ನಿಂತಿರುವುದನ್ನು ದೂರದಿಂದಲೇ ನೋಡಬಹುದು. ರಂಗಸ್ವಾಮಿ ಶಿಖರದಿಂದ ಉತ್ತರ ಪಶ್ಚಿಮಕ್ಕೆ ದೇನಾಡು ಗ್ರಾಮದಾಚೆ ರಂಗಸ್ವಾಮಿ ಕಂಬವಿದೆ. ಇದು ಸುಮಾರು 400 ಅಡಿ ಅಂದರೆ 120 ಮೀ ಉದ್ದವಿದೆ. ಒಂದೇ ಕಲ್ಲಿನಿಂದ ಬೆಳೆದು ನಿಂತಿರುವ ಕಂಬ. ಹತ್ತಲು ಸಾಧ್ಯವಿಲ್ಲದ ಕಡಿದಾದ ಕಲ್ಲಿನ ರಚನೆಯನ್ನು ಹೊಂದಿರುತ್ತದೆ. ಕೋತಗಿರಿಯಿಂದ ಎಂಟು ಕಿ.ಮೀ. ದೂರದಲ್ಲಿರುವ ಕ್ಯಾಥರಿನ್ ಫಾಲ್ಸ್ ಮತ್ತು ಉಯಿಲು ಫಾಲ್ಸ್ ಚಾರಣಿಗರನ್ನು ಆಕರ್ಷಿಸುವ ಎರಡು ತಾಣಗಳಿವೆ. ಪ್ರಾಕೃತಿಕ ಸೌಂದರ್ಯಕ್ಕೆ ಹೆಸರಾದ ಕೋತಗಿರಿಯನ್ನು ಒಮ್ಮೆ ನೋಡಲು

ಸಾಧ್ಯವಾದರೆ ಹೋಗುವ ಪ್ರಯತ್ನ ಮಾಡಿ.

**ಕುಂದಾ**

ಊಟಿಯ ದಕ್ಷಿಣಕ್ಕಿರುವುದು ಕುಂದಾ ತಾಲ್ಲೂಕು. ತಾಲ್ಲೂಕಿನ ಪಶ್ಚಿಮಕ್ಕೆ ವಿಶಾಲವಾದ ಹುಲ್ಲು ಹಾಸು, ಗುಡ್ಡಗಳು ಹಾಗೂ ಶೋಲಾ ಕಾಡುಗಳಿಂದ ಸುತ್ತುವರೆದಿರುತ್ತದೆ. ಕೋಡೆ ಗಾಳಿ ನೀಲಗಿರಿಗೆ ಪ್ರವೇಶಿಸುವುದು ಇಲ್ಲಿಂದಲೇ. ಪಶ್ಚಿಮಕ್ಕೆ ಕೇರಳ ರಾಜ್ಯವಿದೆ. ಊರಿನ ಮಧ್ಯೆ ಕುಂದಾ ನದಿ ಹರಿಯುತ್ತದೆ. ಹಿಂದೆ ಅದಕ್ಕೆ ಕುಂದಾಪಾಲ ಎಂಬ ಹೆಸರಿತ್ತು. ಸೇತುವೆಯ ಸ್ಥಳದಲ್ಲೇ ಅಣೆಕಟ್ಟನ್ನು ನಿರ್ಮಿಸಲಾಗಿದ್ದರಿಂದ ಪಾಲಾ ಎಂಬ ಪದ ಕಳೆದುಕೊಂಡು ಈಗ ಅದು ಬರಿಯ ಕುಂದಾ ಆಗಿರುತ್ತದೆ. ಹೆಚ್ಚು ಮಳೆ ಬೀಳುವ, ಹೆಚ್ಚು ಗಾಳಿ ಬೀಸುವ ಮತ್ತು ಚಳಿ ಇರುವ ಪ್ರದೇಶ ಕುಂದಾ. ಪಶ್ಚಿಮದ ಗಡಿ ದಾಟಿದರೆ ಕೇರಳದ ಮೌನ ಕಣಿವೆಯ ಅಂಚಿಗೆ ಇಳಿಯಬಹುದು. ಟೀ ಬೆಳೆಗೆ ಹೆಸರಾದ ಕೋರಕುಂದ, ತಾಯಿಶೋಲೆ ತೋಟ ಪ್ರಾರಂಭದಲ್ಲಿ ಮೈಸೂರು ಅರಸರ ಒಡೆತನದಲ್ಲಿತ್ತಂತೆ. ಈಗಲೂ ಸಣ್ಣ ಮಾದರಿಯ ಟೀ ಬೆಳೆಗಾರರ ಸಹಕಾರ ಟೀ ಫ್ಯಾಕ್ಟರಿಗಳಿವೆ. ಕುಂದಾ ಕಣಿವೆಯ ಬಡಗರ ಸೀಮೆಗಳಲ್ಲಿ ಆಲೂಗಡ್ಡೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಮೇಟುಪಾಳ್ಯದ ಮಂಡಿಗಳಿಗೆ ಹೋಗುವ ಆಲೂಗಡ್ಡೆಯ ಹೆಚ್ಚು ಪಾಲು ಕುಂದಾ ಪ್ರದೇಶದ ತೋಟಗಳದ್ದಾಗಿರುತ್ತದೆ.

ಕುಂದಾ ತಾಲ್ಲೂಕಿನ ವೈಶಿಷ್ಟ್ಯವೆಂದರೆ ಹೆಚ್ಚು ಅಣೆಕಟ್ಟುಗಳನ್ನು ಹೊಂದಿರುವ ಸ್ಥಳ. ಅಪ್ಪರ್ ಭವಾನಿ, ಅವಲಾಂಜಿ, ಕುಂದಾ, ಗದ್ದೆ, ಪರಲಿ ಹಾಗೂ ಕಾಟ್ಟುಕುಪ್ಪೆ ಅಣೆಕಟ್ಟುಗಳ ವಿದ್ಯುತ್ ಸ್ಥಾವರಗಳು ಹೆಸರುವಾಸಿಯಾಗಿರುತ್ತವೆ. ಕುಂದಾ ನದಿ ದಡದ ಮೇಲಿದ್ದ ಇಕ್ಕಟ್ಟಿನ ಪುಟ್ಟ ಪೇಟೆ ಕುಂದಾ. ಬಸ್ಸಿನ ಮಾರ್ಗ, ಅಣೆಕಟ್ಟು ಅದೇ ಸ್ಥಳದಲ್ಲಿ ನಿರ್ಮಾಣಗೊಂಡ ಕಾರಣ ಅಲ್ಲಿನ ಅಂಗಡಿ ಮುಂಗಟ್ಟು, ಪೇಟೆ ಬೀದಿ ಅಲ್ಲಿಂದ ಎತ್ತಂಗಡಿಯಾಗಿ ಬೆಟ್ಟದ ತುದಿಯಲ್ಲಿರುವ ಮಂಜೂರಿಗೆ ಸ್ಥಳ ಬದಲಾವಣೆ ಮಾಡಿಕೊಂಡಿರುತ್ತದೆ. ಸಾಧ್ಯವಾದರೆ ಮತ್ತೊಂದು ಸ್ವಿಟ್ಜರ್‌ಲ್ಯಾಂಡ್‌ನ್ನು ಕುಂದಾ ಎಂಬ ಸ್ಥಳದಲ್ಲಿ ವೀಕ್ಷಣೆ ಮಾಡಬಹುದು.

**ಪಂದಲೂರು**

ಸಮುದ್ರ ಮಟ್ಟದಿಂದ ಎಂಟುನೂರು ಮೀಟರ್ ಎತ್ತರದಲ್ಲಿದೆ. ಗೂಡಲೂರಿನಿಂದ ಪಶ್ಚಿಮಕ್ಕೆ 23 ಕಿ.ಮೀ ದೂರದಲ್ಲಿ ಕೇರಳ ರಾಜ್ಯಕ್ಕೆ ಹೋಗುವ ಮಾರ್ಗದಲ್ಲಿದೆ. ಪಂದಲೂರು ಹಿಂದೆ ವಿಸ್ತಾರವಾಗಿದ್ದ ಗೂಡಲೂರಿನ ಒಂದು ಭಾಗವಾಗಿತ್ತು. ಇದನ್ನು ವಿಭಜಿಸಿ ಪಂದಲೂರು ತಾಲ್ಲೂಕು ರೂಪುಗೊಂಡಿತು. ಹೀಗಾಗಿ ವಾತಾವರಣವೆಲ್ಲವೂ ಗೂಡಲೂರಿನಂತೆಯೇ ಇದೆ. ಇದಕ್ಕೂ ಮೊದಲು ಈ ಭಾಗವು ಮೈಸೂರು ಸೀಮೆಯ ಭಾಗವಾಗಿತ್ತು. ಉಮ್ಮತ್ತೂರು ಅರಸರ ಕಾಲದಲ್ಲಿ, ನಂತರ ಮೈಸೂರು ಅರಸರ ಕಾಲದಲ್ಲಿ ನೆಲ್ಲಿಯಾಳದ ರಾಣಿ ಬೋರಮ್ಮ ಅರಸರ

ಪ್ರತಿನಿಧಿಯಾಗಿ ಆಡಳಿತ ನಿರ್ವಹಿಸುತ್ತಿದ್ದರು. ಬೋರಮ್ಮ ರಾಣಿಯನ್ನು ಸ್ಥಳೀಯರು ಬಹಳ ಗೌರವದಿಂದ ಕಾಣುತ್ತಿದ್ದರು. ಭುಜಂಗರಾಜ ನೆಲ್ಲಿಯಾಳದ ದೊಡ್ಡ ಜಮೀನ್ದಾರನಾಗಿದ್ದ. ಈತನಿಗೆ ಸೇರಿದ್ದ ಸುಮಾರು ಹತ್ತು ಸಾವಿರ ಎಕರೆಯಷ್ಟು ವಿಸ್ತಾರವಾದ ಜಮೀನಿತ್ತು. ನೆಲ್ಲಿಯಾಳದ ಕೋಟಕ್ಕುನ್ನ ಎಂಬಲ್ಲಿ ಅವರು ವಾಸಿಸುತ್ತಿದ್ದರು. ಆ ಕಾಲಕ್ಕೆ ನಿಲಂಬೂರು ದೇವಾಲಯಕ್ಕೆ ಸೇರಿದ ಜಮೀನನ್ನು ಹೊರತುಪಡಿಸಿದರೆ, ಭುಜಂಗರಾಜ ಎರಡನೇ ದೊಡ್ಡ ಜಮೀನುದಾರನಾಗಿದ್ದನು. ಈತನಿಗೆ ಗಂಡುಸಂತಾನವಿಲ್ಲದ ಕಾರಣ ಕೊಳ್ಳೆಗಾಲದ ಸಮೀಪದ ಮಧುವನಹಳ್ಳಿ ಮೂಲದ ಬೋರಮ್ಮನನ್ನು ವಿವಾಹವಾದನು. ಆದರೆ ಆಕೆಗೂ ಮಕ್ಕಳಾಗಲಿಲ್ಲ. ರಾಣಿ ಒಂದು ಗಂಡು ಮಗುವನ್ನು ದತ್ತು ತೆಗೆದುಕೊಂಡಿದ್ದಳು. ರಾಣಿಯು ಕಾಯಿಲೆಯಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಜಮೀನಿನ ವ್ಯವಹಾರ ನೋಡಿಕೊಳ್ಳುತ್ತಿದ್ದ ಪಾರುಪತ್ಯೆಗಾರರು ಮೋಸದಿಂದ ಅವರ ಜಮೀನಿನ ಬಹುಪಾಲನ್ನು ಅತಿಕ್ರಮಿಸಿ ವಶಪಡಿಸಿಕೊಂಡು ಪರಭಾರೆ ಮಾಡಿದರು. ಇದರಿಂದ ರಾಣಿ ಆಘಾತಕ್ಕೆ ಒಳಪಟ್ಟರು. ಜಮೀನನ್ನು ಇವರಿಂದ ಮತ್ತೆ ವಶಪಡಿಸಿಕೊಳ್ಳುವ ಪ್ರಯತ್ನಪಟ್ಟರೂ ಸಾಧ್ಯವಾಗದೆ ರಾಣಿ ಕೊನೆಗಾಲದಲ್ಲಿ ಬಡತನವನ್ನು ಅನುಭವಿಸಿದರು.

ಪಂದಲೂರಿನ ನೆಲ್ಲಿಯಾಳದಲ್ಲಿ ಇತ್ತೀಚಿನ ವರ್ಷಗಳವರೆಗೆ ಜೀರ್ಣಾವಸ್ಥೆಗೆ ತಲುಪಿದ್ದ ರಾಣಿ ಕೋಟೆಯ ಗೋಡೆಯನ್ನು ಕಾಣಬಹುದಿತ್ತು. ಈಗ ರಾಣಿಯ ವಂಶಸ್ಥರ ಪಾಲಿಗೆ ಕೇವಲ ಆರು ಎಕರೆಯಷ್ಟು ಜಮೀನು ಉಳಿದುಕೊಂಡಿರುತ್ತದೆ. ವಂಶಸ್ಥರು ಅಲ್ಲಿಯೇ ಮನೆಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದಾರೆ. 19ನೇ ಶತಮಾನದ ಮಧ್ಯಭಾಗದವರೆಗೆ ಪಂದಲೂರಿನಲ್ಲಿ ಸುಮಾರು ನಾಲ್ಕೈದು ಮನೆಗಳು ಮಾತ್ರವಿದ್ದ ಸಣ್ಣ ಊರಾಗಿತ್ತು. ಆಸುಪಾಸಿನಲ್ಲಿ ಚಿನ್ನದ ನಿಕ್ಷೇಪವಿರುವುದನ್ನು ಅರಿತ ಬ್ರಿಟಿಷರು ತರಾತುರಿಯಲ್ಲಿ ಗಣಿಗಾರಿಕೆಗಾಗಿ ಪಂದಲೂರಿನಲ್ಲಿ ಬಂಗಲೆ, ಕ್ಲಬ್, ಅಂಗಡಿ ಮುಂಗಟ್ಟುಗಳನ್ನು ನಿರ್ಮಿಸಿದರು. ಗಣಿಗಾರಿಕೆಯೂ ಪ್ರಾರಂಭಗೊಂಡಿತು. ಆದರೆ ಅಲ್ಲಿನ ಮಣ್ಣಿನಲ್ಲಿರುವ ಚಿನ್ನದ ಪ್ರಮಾಣವು ಅತ್ಯಲ್ಪ ಎಂಬುದು ಇವರ ಗಮನಕ್ಕೆ ಬಂತು. ಗಣಿಗಾರಿಕೆಗೆ ಹಣ ಹೂಡಿದವರು ಕೈಸುಟ್ಟುಕೊಂಡರು. ನಂತರ ಗಣಿಗಾರಿಕೆಯನ್ನು ನೆಚ್ಚಿಕೊಂಡು ಅಲ್ಲಿಗೆ ಬಂದಿದ್ದ ಕೆಲಸಗಾರರೂ ಅಲ್ಲಿನ ವಾತಾವರಣ ಮತ್ತು ಮಣ್ಣು ಕೃಷಿಗೆ ಯೋಗ್ಯವಾಗಿರುವುದನ್ನು ಗಮನಿಸಿದ್ದರು. ಬಹುಮಟ್ಟಿನ ಭೂಮಿ ನಿಲಂಬೂರು ದೇವಾಲಯದ ಅಧೀನದಲ್ಲಿತ್ತು. ಗಣಿಗಾರಿಕೆಯಲ್ಲಿ ಸೋತವರು ಅಲ್ಲಿ ಕಾಫಿ, ಟೀ ತೋಟಗಳನ್ನು ಅಭಿವೃದ್ಧಿಪಡಿಸಲು ಮುಂದಾದರು. ಅನೇಕರು ಪಂದಲೂರು ಹಾಗೂ ವಯನಾಡಿನ ಭಾಗದಲ್ಲಿ ನೆಲೆಸಿದರು. ತೋಟಗಳಲ್ಲಿ ಕೆಲಸ ಮಾಡಲು ಬಹುಸಂಖ್ಯೆ ಕೆಲಸಗಾರರ ಅಗತ್ಯ ಕಂಡುಬಂತು. ಆ ಸಂದರ್ಭದಲ್ಲಿ ಅನೇಕ ಆದಿವಾಸಿಗಳು ಜೀತಗಾರಿಕೆಯಿಂದ ಮುಕ್ತಿ ಪಡೆದು ತೋಟಗಳ ಕೆಲಸಗಾರರಾದರು.

ಪಂದಲೂರು ಪ್ರದೇಶವನ್ನು ಪಣಿಯ ಕುರುಬ ಹಾಗೂ ಕಾಡುನಾಯಕ ಸಮುದಾಯಗಳ ಪವಿತ್ರ ಸ್ಥಳವೆಂದು ಭಾವಿಸಲಾಗುತ್ತದೆ. ಮಲಬಾರಿನಿಂದ ಅತ್ಯಧಿಕ

ಸಂಖ್ಯೆಯಲ್ಲಿ ಇಲ್ಲಿಗೆ ಬಂದು ನೆಲೆಸಿರುವ ವಲಸೆಗಾರರ ಪ್ರಭಾವದಿಂದಾಗಿ ಇಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಪರಿಸರದ ಮೇಲೆ ಮಹತ್ವದ ಪರಿಣಾಮ ಉಂಟಾಗಿರುತ್ತದೆ. ಇಲ್ಲಿಯವರೆವಿಗೂ ತಾವೇ ಅಲ್ಲಿನ ಒಡೆಯರು ಎಂದು ಶ್ರಮಿಸಿದ್ದ ಆದಿವಾಸಿಗಳು ಸ್ವಂತ ಭೂಮಿಯನ್ನು ಹೊಂದುವುದಕ್ಕಾಗಿ ಹೋರಾಟ ನಡೆಸಬೇಕಾದ ಪರಿಸ್ಥಿತಿ ಉಂಟಾಗಿದೆ. ವಲಸಿಗರಿಗೆ ಹೋಲಿಸಿದರೆ ಅಲ್ಲಿನ ಆದಿವಾಸಿಗಳಿಗೆ ಭೂ ಒಡೆತನದ ಅವಕಾಶ ಸೀಮಿತ ಪ್ರಮಾಣದ್ದಾಗಿರುತ್ತದೆ.

## ಪರಾಮರ್ಶನ ಗ್ರಂಥಗಳು:

1. ಮೋಹನದಾಸ್, (2021), ಸಿರಿಸಂಗಮ ಚಿತ್ರಲೇಖನ, ಮೈಸೂರು: ಅಭಿರುಚಿ ಪ್ರಕಾಶನ.
2. ಪರಂಜ್ಯೋತಿ, (2015), ನೀಲಗಿರಿ ಸಮಾಜಿಕ ಸಾಂಸ್ಕೃತಿಕ ಕಣ್ಣೋಟ, ಬೆಂಗಳೂರು: ಇಂಚರ ಪ್ರಕಾಶನ.
3. ವಿಜಯಕುಮಾರ್ ವಿ., (2002), ನೀಲಗಿರಿ ಟೀ ತೋಟಗಳಲ್ಲಿನ ವಲಸೆ ಕನ್ನಡಿಗ ಕೂಲಿ ಕಾರ್ಮಿಕರ ಸ್ಥಿತಿಗತಿಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ (ಪಿಹೆಚ್.ಡಿ. ಸಂಶೋಧನಾ ಮಹಾಪ್ರಬಂಧ), ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.